**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ಕನಕಪುರ**

**ಸಿ.ಸಿ.ನಂ.924/2018**

# :: ದೋಷಾರೋಪಣೆ ::

**ಶ್ರೀ ಹನುಮಂತ ಜಿ.ಹೆಚ್. ಬಿ.ಎ.ಎಲ್. ಎಲ್‌ಎಲ್.ಎಮ್., ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, , ಕನಕಪುರ ಆದ ನಾನು**

ಮಹದೇವಯ್ಯ
ಬಿನ್ ಮಾದಪ್ಪ
ವಯಸ್ಸು ೩೨ ವರ್ಷಗಳು
ವಾಸಃ ತಟ್ಟೆಕೆರೆ ಗ್ರಾಮ
ಮರಳವಾಡಿ ಹೋಬಳಿ
ಕನಕಪುರ ತಾಲ್ಲೂಕು

**ಎಂಬ ಆರೋಪಿತರಾದ ನಿಮ್ಮ ಮೇಲೆ ಈ ಕೆಳಗಿನಂತೆ ಹೊರಿಸುವ ದೋಷಾರೋಪವೇನೆಂದರೆ :-**

ದಿನಾಂಕ.೦೮.೧೨.೨೦೧೭ ರಂದು ಸಂಜೆ ೫:೦೦ ಗಂಟೆ ಸಮಯದಲ್ಲಿ ಹಾರೋಹಳ್ಳಿ ಪೊಲೀಸ್ ಠಾಣೆ ವ್ಯಾಪ್ತಿಗೆ ಸೇರಿದ ಹಾರೋಹಳ್ಳಿ-ಆನೇಕಲ್ ಮುಖ್ಯರಸ್ತೆ, ಗೋದೂರು ಗ್ರಾಮದ ಗೇಟ್ ಬಳಿ ಚಾಸಾ-೧ ಶಿವಯ್ಯ ರವರು ತಮ್ಮ ಊರಿಗೆ ಹೋಗುತ್ತಿದ್ದಾಗ ಆರೋಪಿತರಾದ ನೀವು ಅವರನ್ನು ಅಡ್ಡ ಹಾಕಿಕೊಂಡು ಮಂಗಳ ಎನ್ನುವವರ ವಿಚಾರದಲ್ಲಿ ಹಳೆಯ ದ್ವೇಷವನ್ನಿಟ್ಟುಕೊಂಡು ಜಗಳ ತೆಗೆದು ಚಾಸಾ-೧ ರವರು ನಿಮಗೆ ಹಣ ಕೊಡದಿದ್ದರೆ ಅವರ ಬಗ್ಗೆ ಅಪಪ್ರಚಾರ ಮಾಡುತ್ತೇನೆಂದು ಹೆದರಿಸಿ ರೂ.೫,೦೦೦/- ಗಳನ್ನು ಬಲವಂತವಾಗಿ ಅವರಿಂದ ಪಡೆದುಕೊಳ್ಳುವ ಮೂಲಕ ಭಾ.ದಂ.ಸಂಹಿತೆ ಕಲಂ ೩೮೪ ರಡಿಯಲ್ಲಿ ದಂಡಿಸಲ್ಪಡುವ ಅಪರಾಧ ಎಸಗಿರುತ್ತೀರಿ ಎಂದು ನಿಮ್ಮ ಮೇಲೆ ಆರೋಪ ಇದೆ.

ನಾನು ಈ ಮೇಲಿನ ದೋಷಾರೋಪಣೆಗಳ ಮೇಲೆ ಈ ನ್ಯಾಯಾಲಯದ ವಿಚಾರಣೆಗೆ ನೀವು ಗುರಿಯಾಗಬೇಕೆಂದು ನಿರ್ದೇಶಿಸುತ್ತೇನೆ.

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆಎಂಎಫ್‌ಸಿ, ಕನಕಪುರ.

**<u>ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾ</u>**

**<u>ಧಿಕಾರಿಯವರ ನ್ಯಾಯಾಲಯ, ಕನಕಪುರ</u>**

**<u>ಸಿ.ಸಿ.ನಂ.924/2018</u>**

**<u>ಃ ದೋಷಾರೋಪಣೆ ಃ</u>**

ಮಹದೇವಯ್ಯ
ಬಿನ್ ಮಾದಪ್ಪ
ವಯಸ್ಸು **೩೨** ವರ್ಷಗಳು
ವಾಸಃ ತಟ್ಟೆಕೆರೆ ಗ್ರಾಮ
ಮರಳವಾಡಿ ಹೋಬಳಿ
ಕನಕಪುರ ತಾಲ್ಲೂಕು

ನಿಮಗೆ ಓದಿ ಹೇಳಿದ ದೋಷರೋಪಣೆ ಅರ್ಥವಾಯಿತಾ?

ಉಃ. ಹೌದು

ನೀವು ತಪ್ಪು ಒಪ್ಪಿಕೊಳ್ಳುವಿರೋ ಅಥವಾ ವಿಚಾರಣೆ ಆಗಬೇಕಾ?

ಉಃ ವಿಚಾರಣೆಯಾಗಬೇಕು

ಮೇಲಿನ ಹೇಳಿಕೆಯನ್ನು ಆಪಾದಿತನಿಗೆ ಓದಿ, ಹೇಳಿ ತಿಳಿಸಿ ಅವರ ಹೇಳಿಕೆ ಪಡೆದುದಾಗಿ ದೃಡಿಕರಿಸುತ್ತೇನೆ.

**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು**

**ಜೆಎಂಎಫ್‌ಸಿ, ಕನಕಪುರ.**